OS No. 87/2022

DW-1

**(ಇಂದು ದಿಃ 13-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.NR ವಕೀಲರಿಂದಃ-**

ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ತಂತಿ ಬೇಲಿಯ ಒಳಗೆ ಕಾಣುತ್ತಿರುವುದು ದಾವಾ ಸ್ವತ್ತು ಎಂದು ನೋಡಿ ಗುರುತಿಸಿದ್ದು ಅದೇ ರೀತಿ ಸಾಕ್ಷಿ ಇನ್ನು 5 ಪೋಟೋಗಳನ್ನು ನೋಡಿ ಅದರಲ್ಲಿ ಕಾಣುವುದು ದಾವಾ ಸ್ವತ್ತು ಎಂದು ನೋಡಿ ಗುರುತಿಸಿದ್ದು, ಸದರಿ 6 ಪೋಟೋಗಳನ್ನು ನಿಪಿ-7 ರಿಂದ 12 ಎಂದು ಗುರುತಿಸಲಾಯಿತು. ಸರ್ವೇ ನಂಬರ 283 ರಲ್ಲಿನ ಬತ್ತದ ನಾಟಿಗೆ ನಾವು ವಿಷಪೂರಿತ ಔಷದ ಸಿಂಪಡಿಸಿ ಬೆಳೆ ನಾಶ ಮಾಡಿದ ಸಂಬಂಧ FIR ಆಗಿತ್ತು ಅದರ Cr. No.114/2025 ಎಂದರೆ ಕೇಸ್ ನಂಬರ ಸರಿಯಾಗಿದೆ ಆದರೆ ನಾವು ಔಷದಿ ಸಿಂಪಡಿಸಿಲ್ಲ ಎಂದು ಹೇಳುತ್ತಾರೆ . ಸರ್ವೇ ನಂಬರ 274 ರಿಂದ ಸರ್ವೇ ನಂಬರ 283 ಕ್ಕೆ ಪೈಪ್ ಲೈನ್ ಇದೆ ಎಂದರೆ ರಸರಿ . ಸರ್ವೇ ನಂಬರ 274 ರಲ್ಲಿ ಬೋರ್ ವೆಲ್ ಇದೆ ಎಂದರೆ ಸರಿ. ಸದರ ಬೋರ್ ವೆಲ್ ನ ವಿದ್ಯುತ್ ಸಂಪರ್ಕದ RR No.KNTP-2 ಎಂದರೆ ಸರಿ. ಸಾಕ್ಷಿ ಸದರಿ ವಿದ್ಯುತ್ ಸಂಪರ್ಕದ ದಾಖಲಾತಿಯನ್ನು ನೋಡಿ ಒಪ್ಪಿ ಕೊಂಡಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಸರ್ವೇ ನಂಬರ 283 ಮತ್ತು 274 ರ ಜಮೀನುಗಳು ತಂತಿ ಬೇಲೆಯೊಳಗೆ ಬರುತ್ತವೆ ಎಂದರೆ ಸರಿ . ದಾವಾ ಜಮೀನಿನಲ್ಲಿ ನಾವು ಯಾವತ್ತು ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಪ್ರಶ್ನೆ ಮಾಡಿದಾಗ ನಾನು ತಂತಿ ಬೇಲಿ ಇಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ತಂತಿ ಬೇಲಿ ಒಳಗೆ ಮೇಗಲಪ್ಪನ ಸರ್ವೇ ನಂಬರ 275 ಕೂಡ ಬರುತ್ತದೆ ಎಂದರೆ ಸರಿ. ಮೋಗಲಪ್ಪ ತನಗೆ ಸೇರಿದ ಸರ್ವೇ ನಂಬರ 274 , 275 ಮತ್ತು 283 ರ ಜಮೀನುಗಳನ್ನು ಸೇರಿಸಿ ಆತನೆ ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರತಿ ವಾದ ಪತ್ರದಲ್ಲಿ ನಾವು ತಂತಿ

OS No. 87/2022
DW-1

ಬೇಲಿ ಹಾಕಿದ್ದೇವೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಈ ಹಿಂದೆ ನಾನು ಸಾಕ್ಷಿ ಹೇಳುವಾಗ ತಂತಿ ಬೇಲಿ ಇಲ್ಲಎಂದು ಹೇಳಿದ್ದೆ ಇವತ್ತು ಪೋಟೋಗಳನ್ನು ನೋಡಿ ತಂತಿ ಬೆಲಿ ಇದೆ ಎಂದು ಒಪ್ಪಿ ಕೊಂಡಿದ್ದೇನೆ ಎಂದರೆ ಸರಿಯಲ್ಲ, ನಾನು ದಾವಾ ಸ್ವತ್ತಿನಲ್ಲಿ ಕಬ್ಜಾದಲ್ಲಿ ಇಲ್ಲದೇ ಇದ್ದರೂ ಕೂಡ ಕಬ್ಜಾದಲ್ಲಿದ್ದೇನೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮೋಗಲಪ್ಪನ ತಂದೆಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಕಾರಣ ದಾವಾ ಸ್ವತ್ತಿನಲ್ಲಿ ನನಗೆ ಯೂವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ನಾನು DNA ಪರೀಕ್ಷೆಗೆ ಸಿದ್ದನಿದ್ದೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**